## **ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ ಃ 947/2021**

**ಚಾಸಾ ಃ 15**
**ಪ್ರಾಸಾ ಃ 13**

| | | |
|---|---|---|
| **ಹೆಸರು** | : | ರಮೇಶ ಕೆ ಪಿ |
| **ತಂದೆಯ ಹೆಸರು** | : | ಲೇಟ್ ಕೆ ಸಿ ಪೀತಾಂಬರ |
| **ವಯಸ್ಸು** | : | 52 ವರ್ಷ |
| **ಉದ್ಯೋಗ** | : | ಪೋಲಿಸ್ ಮುಖ್ಯ ಪೇದೆ, ಸಿದ್ದಾಪುರ ಪೋಲಿಸ್ ಠಾಣೆ |
| **ವಾಸಸ್ಥಳ** | : | ಸಿದ್ದಾಪುರ |

**ದಿನಾಂಕ : 11-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ ಃ -**

ನಾನು ಕಳೆದ ನಾಲ್ಕು ವರ್ಷಗಳಿಂದಲೂ ಸಿದ್ದಾಪುರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 13-05-2021 ರಂದು ಸಂಜೆ 4.30 ಗಂಟೆಗೆ ನಾನು ಠಾಣಾ ಉಸ್ತುವಾರಿಯಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಪುಕಾರನ್ನು ಹೊಂದಿಕೊಂಡು ಠಾಣಾ ಮೊ. ಸಂಖ್ಯೆ 44/2021 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದನ್ನು ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ1 ನ್ನು ತೋರಿಸಲಾಗಿ, ಸಾಕ್ಷಿ ಅದು ಚಾಸಾ-1 ರವರು ನೀಡಿದ ದೂರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ದಾಖಲಿಸಿದ ಪ್ರಥಮ ವರ್ತಮಾನ ವರದಿ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ21 ಎಂದು ಗುರುತಿಸಲಾಯಿತು.

ನಂತರ ಅದೇ ದಿನ ತನಿಖೆಯನ್ನು ಮುಂದುವರೆಸಿ ಪಿರ್ಯಾದುದಾರರಾದ ಚಾಸಾ1 ರವರ ಜೊತೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು, ಅಲ್ಲಿಗೆ

ಪಂಚಾಯಿತಿದಾರರಾದ ಚಾಸಾ-4 ಹಾಗೂ 5 ರವರನ್ನು ಬರಮಾಡಿಕೊಂಡು, ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ಮಹಜರಿನ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು, ಅದಕ್ಕೆ ಅವರು ಒಪ್ಪಿಕೊಂಡಿದ್ದು, ನಂತರ ಚಾಸಾ-1 ರವರು ಕೃತ್ಯ ಸ್ಥಳವನ್ನು ತೋರಿಸಿ ಕೊಟ್ಟು, ಆರೋಪಿಗಳು ಕೃತ್ಯ ಎಸಗಿದ ಸತ್ತ ಹಸುವಿನ ಚರ್ಮ, ಸತ್ತ ಹಸುವಿನ ಸಣ್ಣ ಕರಳು ಹಾಗೂ ದೊಡ್ಡ ಕರುಳುಗಳಿಂದ ಕೂಡಿದ ಬೋಟಿಯನ್ನು ತೋರಿಸಿಕೊಟ್ಟ ಮೇರೆಗೆ ಚಾಸಾ1, 4 ಹಾಗೂ 5 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಸದರಿ ಸತ್ತ ಹಸುವಿನ ಚರ್ಮ, ಸತ್ತ ಹಸುವಿನ ಸಣ್ಣ ಕರಳು ಹಾಗೂ ದೊಡ್ಡ ಕರುಳುಗಳಿಂದ ಕೂಡಿದ ಬೋಟಿಯನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತೇವೆ. ಸಾಕ್ಷಿಗೆ ನಿಪಿ2 ನ್ನು ತೋರಿಸಲಾಗಿ, ಸಾಕ್ಷಿ ಅದು ಕೃತ್ಯ ಸ್ಥಳದಲ್ಲಿ ಜರುಗಿಸಿದ ಮಹಜರು ಎಂದು ಗುರುತಿಸಿ, ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 3 ರಿಂದ 5 ಫೋಟೊಗಳು ಹಾಗೂ ನಿಪಿ6 ಸಿಡಿಯನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೇ ಹೇಳಿದಂತೆ ನಿಪಿ2 ರಂತೆ ಮಹಜರ ಕ್ರಮ ಜರುಗಿಸುವಾಗ ತೆಗೆದ ಫೋಟೋಗಳು ಹಾಗೂ ಅದಕ್ಕೆ ಸಂಬಂದಿಸಿದ ಸಿಡಿ ಎಂದು ಗುರುತಿಸುತ್ತಾರೆ.

ನಂತರ ಠಾಣೆಗೆ ಹಿಂತಿರುಗಿ ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 48/2021 ರಂತೆ ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ನಿಪಿ2 ರಲ್ಲಿ ಅಮಾನತ್ತುಪಡಿಸಿಕೊಂಡ ಸತ್ತ ಹಸುವಿನ ಚರ್ಮ, ಸತ್ತ ಹಸುವಿನ ಸಣ್ಣ ಕರಳು ಹಾಗೂ ದೊಡ್ಡ ಕರುಳುಗಳಿಂದ ಕೂಡಿದ ಬೋಟಿಯನ್ನು ಗುಂಡಿಯನ್ನು ತೆಗೆದು ಅದರಲ್ಲಿ ಹಾಕಿ, ನಾಶಪಡಿಸಿರುತ್ತೇವೆ. ನಂತರ ಅದೇ ದಿನ ಮಹಜರಿನ ಸಾಕ್ಷಿದಾರರಾದ ಚಾಸಾ4 ಹಾಗೂ 5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಪ್ರಕರಣ ಕಡತವನ್ನು ಚಾಸಾ16 ರವರಿಗೆ ಹಸ್ತಾಂತರಿಸಿರುತ್ತೇನೆ.

ನಂತರ ದಿನಾಂಕ 16-05-2021 ರಂದು ತನಿಖಾಧಿಕಾರಿಗಳಾದ ಚಾಸಾ16 ರವರು ಆರೋಪಿಗಳು ತೋರಿಸಿಕೊಟ್ಟ ಸ್ಥಳದಲ್ಲಿ ಮೂರು ಮಹಜರ ಕ್ರಮ ಜರುಗಿಸಲು ನನ್ನನ್ನು ಆರೋಪಿಗಳ ಬೆಂಗಾವಲಿಗಾಗಿ ಕರೆದುಕೊಂಡು ಹೋಗಿದ್ದು, ಆ ಪ್ರಕಾರ ನಾನು 1 ರಿಂದ 4ನೇ ಆರೋಪಿಗಳನ್ನು ತನಿಖಾಧಿಕಾರಿಯವರ ಜೊತೆ ಬೆಂಗಾವಲಿನಲ್ಲಿ ಹೋಗಿ, ಅಲ್ಲಿ ಸದರಿ ಆರೋಪಿಗಳು ತೋರಿಸಿಕೊಟ್ಟ ಜಾಗದಲ್ಲಿ ತನಿಖಾಧಿಕಾರಿಯವರು ಜರುಗಿಸಿದ ಮಹಜರುಗಳಿಗೆ ನಾನು ಸಹ ಸಹಿ

ಮಾಡಿರುತ್ತೇನೆ. ಸಾಕ್ಷಿಗೆ ನಿಪಿ7 ರಿಂದ 9ನ್ನು ತೋರಿಸಲಾಗಿ, ಸಾಕ್ಷಿಯು ಅವುಗಳು ಮೇಲೆ ಹೇಳಿದಂತೆ ಜರುಗಿಸಿದ ಮಹಜರುಗಳು ಎಂದು ಗುರುತಿಸಿ, ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ7 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ7(ಎಫ್) ಎಂದು, ನಿಪಿ8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ8(ಇ) ಎಂದು ಹಾಗೂ ನಿಪಿ9 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ9(ಇ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 14 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 4ನೇ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟಿ ಸವಾಲು ಃ ಶ್ರೀ. ಕೆ ಜಿ ಎ / ಶ್ರೀ. ಎ ಎಂ ಎಲ್ ಆರೋಪಿಗಳ ಪರ ವಕೀಲರಿಂದ ಃ**

ಚಾಸಾ1 ರವರು ನೀಡಿದ ದೂರಿನ ಆಧಾರದ ಮೇಲೆ ನಾನು ಕರ್ನಾಟಕ ಗೋಹತ್ಯೆ ತಡೆಗಟ್ಟುವಿಕೆ ಮತ್ತು ಗೋಸಂರಕ್ಷಣಾ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಕೃತಸ್ಥಳ ಮಹಜರಿಗೆ ಕರೆದುಕೊಂಡ ಹೋದ ಪಂಚರುಗಳಿಗೆ ನೋಟಿಸ್‌ನ್ನು ಜಾರಿ ಮಾಡಿರುತ್ತೇನೆ. ನಾನು ಯಾವುದೇ ಪಂಚರಿಗೆ ಆ ರೀತಿ ಯಾವುದೇ ನೋಟಿಸ್ ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸತ್ತ ಹಸು ಪಿರ್ಯಾದಿಗೆ ಸೇರಿದ್ದು ಎಂಬ ಬಗ್ಗೆ ನಾನು ಪಿರ್ಯಾದಿಯಿಂದ ಯಾವುದೇ ದಾಖಲೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ಅವರ ದೂರಿನ ಆಧಾರದ ಮೇಲೆ ಅದನ್ನು ಖಚಿತಪಡಿಸಿಕೊಂಡಿರುತ್ತೇನೆಂದು ನುಡಿಯುತ್ತಾರೆ. ಸದರಿ ದಿನದಂದು ಪಶುವೈದ್ಯರಿಂದ ಯಾವುದೇ ದಾಖಲೆ ಪಡೆದುಕೊಂಡಿರುವುದಿಲ್ಲ ಹಾಗೂ ಪಡೆದುಕೊಳ್ಳಲು ಯಾವುದೇ ತೊಂದರೆ ಇದ್ದಿರಲಿಲ್ಲ. ನಿಪಿ2 ಮಹಜರನ್ನು ನಮ್ಮ ಠಾಣಾ ಸಿಬ್ಬಂದಿಯಾದ ಚಾಸಾ11 ರವರು ನನ್ನ ಉಕ್ತಲೇಖನದ ಮೇರೆಗೆ ಬರೆದಿರುತ್ತಾರೆ.

ಪಿರ್ಯಾದಿಯು ದೂರಿನಲ್ಲಿ ತಿಳಿಸಿರುವಂತೆ ಆರೋಪಿಗಳು ಯಾವುದೇ ಕೃತ್ಯ ಎಸಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ 900 ಎಕರೆಯಷ್ಟಿರುವ ಬಿಬಿಟಿಸಿಎಲ್ ಎಸ್ಟೇಟ್ ನಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಸದರಿ ಕಾಡು ಪ್ರಾಣಿಗಳು ಹಸುವನ್ನು ಕೊಂದಿದ್ದು, ಆರೋಪಿಗಳು ಆ ರೀತಿ ಯಾವುದೇ ಹಸುವನ್ನು ಕೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ2 ರಡಿಯಲ್ಲಿ ಅಮಾನತ್ತುಪಡಿಸಿಕೊಂಡಿದ್ದೆ ಎಂದು ಹೇಳಲಾಗಿ ಹಸುವಿನ ಚರ್ಮ, ಸಣ್ಣ ಹಾಗೂ ದೊಡ್ಡ ಕರುಳಿನ ಬೋಟಿ ಪಿರ್ಯಾದಿಯ ಹಸುವಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಕೃತ್ಯವನ್ನು ಎಸಗಿಲ್ಲದೆ ಇದ್ದಾಗಿಯೂ ಸಹ ಚಾಸಾ1

ರವರು ನೀಡಿದ ಸುಳ್ಳು ಪಿರ್ಯಾದಿನ ಆಧಾರದ ಮೇರೆಗೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.